ಹೆಚ್ಚಿಸಲು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ಪ್ರಜಾಪ್ರಭುತ್ವದ ಬೇರುಗಳನ್ನು ಬಲಗೊಳಿಸಲು ಮತ್ತು ಜೊತೆಗಿರುವ ಜನರ ಯೋಚನಾ ಶಕ್ತಿಯನ್ನು ತೀಕ್ಷ್ಣಗೊಳಿಸಲು ಸರಕಾರಗಳು ಬೌದ್ಧಿಕ ಸಂವಾದಗಳನ್ನು ಪ್ರೋತ್ಸಾಹಿಸುತ್ತಿರಬೇಕು. ಈಗ ಸರಕಾರಗಳು ಇಂಥದ್ದಕ್ಕೆ ವಿರುದ್ಧವಾಗಿಯೇ ಕೆಲಸ ಮಾಡುತ್ತಿರುವುದರಿಂದ ಬೌದ್ಧಿಕತೆ ಕಳೆಗುಂದುತ್ತಿದೆ. ಇಂಥ ಸಂದರ್ಭದಲ್ಲಿ ಮಾನವಿಕಗಳಲ್ಲಿ ಕೆಲಸ ಮಾಡುವ ಹೊಸ ಬಗೆಯ ವಿದ್ವಾಂಸರು ಸೃಷ್ಟಿಯಾಗುವುದು ಕಷ್ಟ. ನಕಲಿ ವಿದ್ವಾಂಸರ ಕಾಲವಿದು.

◆ **ನವದೆಹಲಿಯಲ್ಲಿದ್ದು ಕರ್ನಾಟಕವನ್ನು ಗಮನಿಸುತ್ತ ಇರುತ್ತೀರಿ. ಇಲ್ಲಿ, ಅಂದರೆ ಕನ್ನಡದಲ್ಲಿ ಬೌದ್ಧಿಕ ಚಟುವಟಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿವೆ ಎಂದು ಎನ್ನಿಸುತ್ತದೆಯೇ?**

ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ನಡೆಯುತ್ತಿರುವ ಬೌದ್ಧಿಕ ಚಟುವಟಿಕೆಗಳು ಸಾಕಷ್ಟು ಪ್ರಬುದ್ಧವಾಗಿವೆ. ಸಾಹಿತ್ಯ ಮತ್ತು ಸಂಸ್ಕೃತಿಯ ಕುರಿತಾದ ವಾಗ್ವಾದಗಳು ಮತ್ತು ಸಂಶೋಧನೆಗಳು ಪ್ರೌಢವಾಗಿವೆ. ಇದಕ್ಕೆ ಮುಖ್ಯಕಾರಣ ಕನ್ನಡ ಭಾಷೆಯ ಎಲ್ಲವನ್ನೂ ಒಳಗೊಳ್ಳುವ ಗುಣ. ಜೈನರು, ಬೌದ್ಧರು. ಮುಸ್ಲಿಮರು, ಕ್ರಿಶ್ಚಿಯನ್‌ರು, ಎಲ್ಲೆಲ್ಲಿಂದಲೋ ವಲಸೆ ಬಂದ ನೂರಾರು ಸಮುದಾಯಗಳು ಕನ್ನಡ ಸಂಸ್ಕೃತಿಯ ಭಾಗವಾಗಿ ಬೆಳೆದರು. ಯಾರನ್ನೂ ತಿರಸ್ಕರಿಸದ ಕರ್ನಾಟಕವು ಎಲ್ಲ ಧರ್ಮಗಳನ್ನೂ, ಸಮುದಾಯಗಳನ್ನು ಒಳಗೊಳ್ಳುವ ವಿಶಿಷ್ಟತೆಯನ್ನು ಮೆರೆಯಿತು. ಇದು ಇವತ್ತು ದೇಶಕ್ಕೆ ಆದರ್ಶವಾದ ಸಂಗತಿಯಾಗಿದೆ. ಈ ಅಂಶವನ್ನು ಕೆಲವಾದರೂ ಕನ್ನಡ ಸಂಶೋಧಕರು ಮುನ್ನೆಲೆಗೆ ತರುತ್ತಿರುವುದು ಮುಖ್ಯವಾದ ಸಂಗತಿಯಾಗಿದೆ.




◆ **ಅಕಾಡೆಮಿಗಳು, ಪ್ರಾಧಿಕಾರ, ಸಂಸ್ಕೃತಿ ಇಲಾಖೆ ಎಲ್ಲವೂ ಕನ್ನಡಕ್ಕೆ ಇವೆ. ಇವೆಲ್ಲವನ್ನು ಮೀರಿ ಕನ್ನಡಕ್ಕೆ ನಿಜಕ್ಕೂ ಬೇಕಿರುವುದು ಏನು? ಮತ್ತು ಇವೆಲ್ಲ ಸಂಸ್ಥೆಗಳು ಪುಸ್ತಕ ಪ್ರಕಟಣೆ, ಸಭಾ ಕಾರ್ಯಕ್ರಮಗಳಿಗೆ ಸೀಮಿತವಾಗುತ್ತಿವೆ ಯಾಕೆ? ಇವುಗಳನ್ನು ಮುಚ್ಚಿದರೆ ಕನ್ನಡಕ್ಕೆ ಲಾಭವೇ ಅಥವಾ ನಷ್ಟವೇ?**

ಕನ್ನಡಕ್ಕಾಗಿ ಕೆಲಸ ಮಾಡುತ್ತಿರುವ ಅನೇಕ ಸಂಸ್ಥೆಗಳನ್ನು ಮುಚ್ಚಿಬಿಡಿ ಎಂದು ಹೇಳಲು ನನಗೆ ಧೈರ್ಯಸಾಲದು. ಆದರೆ ದಿನದಿಂದ ದಿನಕ್ಕೆ ಅವುಗಳ ಉಪಯುಕ್ತತೆ ಕಡಿಮೆಯಾಗುತ್ತಿದೆ ಎಂದು ಖಂಡಿತವಾಗಿಯೂ ಹೇಳಬಲ್ಲೆ. ಈ ಸಂಸ್ಥೆಗಳಿಗೆ ಕನ್ನಡದ ಇಂದಿನ ಅಗತ್ಯಗಳೇನು ಎಂಬುದರ ಬಗ್ಗೆ ಸ್ಪಷ್ಟ ತಿಳಿವಳಿಕೆ ಇದ್ದಂತಿಲ್ಲ. ಹೊಸತಲೆಮಾರಿನ ಅಗತ್ಯಗಳಿಗೆ ಅನುಗುಣವಾಗಿ ಕನ್ನಡವನ್ನು